ಹಾಕಿಸಿದರು. ಇವನು 2 ಕೋಟಿ ರೂಪಾಯಿ ತಿಂದುಹಾಕಿದ್ದಾನೆ.

ಅಧ್ಯಕ್ಷರು: ನಿಮಗೇನು ಇಷ್ಟು ಖುಷಿ; ನಿಮಗೆ ಟೈಮ್ ಕಳೆಯುವುದು ಎಂದರೆ. ನನಗೆ ಅರ್ಥವೇ ಆಗುವುದಿಲ್ಲ. ಮಾನ್ಯ ನಾಣಯ್ಯನವರು ಇಷ್ಟು ಸ್ಪಷ್ಟವಾಗಿ ಹೇಳಿದ್ದಾರೆ. ಪೈಮಾಫೇಸಿ ಕೇಸ್ ಇದ್ದ ತಕ್ಷಣ ನಮಗೆ ಅವರು ತಿಳಿಸುತ್ತಾರೆ. We will keep them under suspension.' ಎಂದು ಮತ್ತೆ ಅದರ ಮೇಲೆ ಏಕೆ ಚರ್ಚೆ? ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ: ಲೋಕಾಯುಕ್ತಕ್ಕೆ ರೆಫರ್ ಮಾಡಿದಮೇಲೆ ನಾವು ಸಸ್ಪೆಂಡ್ ಮಾಡುವುದು ಹೇಗೆ? ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದೇ ಅದಕ್ಕೋಸ್ಕರ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಪಾಪ, ಇಷ್ಟೇ ಸಿಂಪಲ್ ಕೇಳಿದ್ದು. ಅವರೇನು ಕೇಳಿದರು, ಸಸ್ಪೆಂಡ್ ಮಾಡಿದ ಮೇಲೆ ಪ್ರಮೋಷನ್ ಮಾಡಿದ್ದೀರಾ? ಇಷ್ಟು ಹೇಳಿ ಎಂದು.

ಅಧ್ಯಕ್ಷರು: ಅವರು ಹೇಳಿದರಲ್ಲಾ ಅದನ್ನು, ನನಗೆ ಗೊತ್ತಿದ್ದ ಹಾಗೆ ಮಾಡಿಲ್ಲವೆಂದು. ಮಾನ್ಯ ಮಹದೇವಪ್ಪನವರೂ ಕೂಡ ಹೇಳಿದರು, ನನಗೆ ತಿಳಿದಹಾಗೆ ನಾವು ಮಾಡಿಲ್ಲ ಹಾಗೆ ಎಂದು ಹೇಳಿ ಹೇಳಿದರು. ಮಾನ್ಯ ನಾಣಯ್ಯನವರೇ, ಈಗ ಅಪ್ಪಚ್ಚುರಂಜನ್‌ರವರ ವಿಚಾರಕ್ಕೆ ತಾವು ಉತ್ತರ ಹೇಳಿಬಿಡಿ. ಪ್ರಕಟಣೆಗಳು ಇದ್ದಾವೆ.

ವಿಷಯ: ಸೋಮವಾರ ಪೇಟೆಯಲ್ಲಿ ನಡೆದಿದೆ ಎನ್ನಲಾದ ಅರಣ್ಯದ ಅವ್ಯವಹಾರ

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಧ್ಯಕ್ಷರೇ, ಮೊನ್ನೆ ಅಪ್ಪಚ್ಚುರಂಜನ್‌ರವರು ಸೋಮವಾರಪೇಟೆಯಲ್ಲಿ ಸ್ವಲ್ಪಮಟ್ಟಿಗೆ ಅರಣ್ಯದ ಅವ್ಯವಹಾರ ನಡೆದಿರುವ ಬಗ್ಗೆ ವಿಚಾರ ಮಾಡಿದರು, ಮಾನ್ಯ ಮಂತ್ರಿಗಳೂ ಕೂಡ ಈ ಸಭೆಯಲ್ಲಿ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲವು ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿಡಬೇಕು ಎನ್ನುವ ವಿಚಾರವನ್ನು ಎತ್ತಿದರು. ಹೆಚ್ಚಿನ ಮಾಹಿತಿ ಕೂಡ ತರಿಸುತ್ತಿದ್ದಾರೆ. ಅದರಲ್ಲಿ ಕೆಲವು ಅಧಿಕಾರಿಗಳ ವಿರುದ್ಧ ಇರುವ ಕೆಲವು ಆಪಾದನೆಗಳು ಯಾವುದು ಇದೆ, ಅದನ್ನು ಪುನಃ ಪರಿಶೀಲನೆ ಮಾಡಿ ಅಮಾನತ್ತಿನಲ್ಲಿಡಬೇಕಾದ ಪರಿಸ್ಥಿತಿ ಬಂದರೆ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಡುತ್ತೇವೆ. ಇದಕ್ಕೆ ಹಿಂದೆಮುಂದೆ ಏನೂ ನಾವು ನೋಡುವುದಿಲ್ಲ.

(10) (i) ಪ್ರಕಟಣೆಗಳು ಹಾಗೂ ತೀರ್ಪು:

ಅಧ್ಯಕ್ಷರು: ಈಗ ಪ್ರಕಟಣೆಗಳು ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನಪರಿಷತ್ತು ದಿನಾಂಕ: 12ನೇ ಸೆಪ್ಟೆಂಬರ್ 1997ರಂದು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿಗಳಿಲ್ಲದೆ